**ದಿನಾಂಕ: 11.02.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು:**
**ಪಾಟೀ ಸವಾಲು: 2 ನೇ ಎದುರುದಾರರ /ವಿಮಾ ಕಂಪನಿ ಪರ ವಕೀಲರಾದ ಶ್ರೀ ಕೆ.ಎಸ್. ರವರಿಂದ:**

11. ಯಾವ ಅಪಘಾತದಲ್ಲಿ ನನ್ನ ಗಂಡನು ಮರಣ ಹೊಂದಿದ್ದಾರೋ ಸದರಿ ಅಪಘಾತವನ್ನು ನಾನು ನೋಡಿರುವುದಿಲ್ಲ. ಅಪಘಾತವು ಆದಂತಹ ಸಮಯದಲ್ಲಿ ನನ್ನ ಗಂಡನು ಕೆಲಸ ಮುಗಿಸಿಕೊಂಡು ಮನೆಗೆ ಬರುತ್ತಾ ಇದ್ದರು. ಅಪಘಾತದ ಸಮಯದಲ್ಲಿ ನನ್ನ ಗಂಡನ ಜೊತೆಯಲ್ಲಿ ಬೇರೆ ಯಾವುದೇ ವ್ಯಕ್ತಿಗಳು ಇರಲಿಲ್ಲ.

12. ಅಪಘಾತದ ಸಮಯದಲ್ಲಿ ನನ್ನ ಗಂಡನು ತಮ್ಮ ದ್ವಿಚಕ್ರ ವಾಹನವನ್ನು ಚಾಲನೆ ಮಾಡುತ್ತಾ ಇದ್ದರು. ನನ್ನ ಗಂಡನಿಗೆ ಸಂಬಂಧಿಸಿದಂತಹ ಚಾಲನಾ ಪರವಾನಗಿಯನ್ನು ಹಾಜರುಪಡಿಸಿದ್ದೇನೆ.

13. ಅಪಘಾತಕ್ಕೆ ಸಂಬಂಧ ಪಟ್ಟ ಹಾಗೆ ನನ್ನ ಗಂಡನ ತಮ್ಮನಾದಂತಹ ರಾಜಶೇಖರ್ ಅವರು ಪೋಲೀಸರಿಗೆ ದೂರನ್ನು ನೀಡಿದ್ದಾರೆ.

14. ನಾನು ಹಾಜರುಪಡಿಸಿರುವಂತಹ ಪೋಲೀಸ್ ದಾಖಲೆಗಳು ಸಮರ್ಪಕವಾಗಿ ಇವೆ.

15. ಅಪಘಾತದ ಸಮಯದಲ್ಲಿ ನನ್ನ ಗಂಡನು ಯಾವ ಕಡೆಯಿಂದ ಯಾವ ಕಡೆಗೆ ತಮ್ಮ ದ್ವಿಚಕ್ರ ವಾಹನವನ್ನು ಚಾಲನೆ ಮಾಡಿಕೊಂಡು ಹೋಗುತ್ತಾ ಇದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ಗಂಡನ ಸ್ನೇಹಿತರೊಬ್ಬರು ನನ್ನ ಗಂಡನನ್ನು ನೋಡಿ ನಂತರ ಮನೆಗೆ ಕರೆದುಕೊಂಡು ಬಂದರು.

16. ನನ್ನ ಗಂಡನ ಸ್ನೇಹಿತರಾದಂತಹ ರಮೇಶ ಎಂಬುವವರು ಅಪಘಾತವನ್ನು ನೋಡಿದ್ದಾರೆ.

17. ಅಪಘಾತದ ಸಮಯದಲ್ಲಿ ನನ್ನ ಗಂಡನು ಹೆಲ್ಮೆಟ್ ಹಾಕಿಕೊಂಡಿರಲಿಲ್ಲ ಎಂದರೆ ಸುಳ್ಳು. ನನ್ನ ಗಂಡನು ಹೆಲ್ಮೆಟ್ ಹಾಕಿಕೊಂಡಿರಲಿಲ್ಲ ಮತ್ತು ಆ ಕಾರಣದಿಂದಲೇ ನನ್ನ ಗಂಡನ ತಲೆಗೆ ಏಟುಗಳು ಬಿದ್ದಿವೆ ಎಂದರೆ ಸುಳ್ಳು.

18. ಅಪಘಾತದ ಸಮಯದಲ್ಲಿ ನನ್ನ ಗಂಡನು ರಸ್ತೆಯ ಯಾವ ಬದಿಯಲ್ಲಿ ಅಥವಾ ಯಾವ ಕಡೆಯಲ್ಲಿ ತಮ್ಮ ದ್ವಿಚಕ್ರ ವಾಹನವನ್ನು ಚಾಲನೆ ಮಾಡಿಕೊಂಡು ಹೋಗುತ್ತಾ ಇದ್ದರು ಎಂದು ನನಗೆ ಗೊತ್ತಿಲ್ಲ.

19. ಮೇಲೆ ಹೇಳಿದಂತಹ ರಮೇಶ ಅವರನ್ನು ನಮ್ಮ ಪರವಾಗಿ ವಿಚಾರಣೆ ಮಾಡಲು ನಮಗೆ ಯಾವುದೇ ತೊಂದರೆಯು ಇರುವುದಿಲ್ಲ.

20. ಯಾವ ಸ್ಥಳದಲ್ಲಿ ಅಪಘಾತವು ಆಗಿದೆಯೋ ಆ ಸ್ಥಳವನ್ನು ನಾನು ನೋಡಿರುವುದಿಲ್ಲ.

21. ತಮ್ಮ ದ್ವಿಚಕ್ರ ವಾಹನವನ್ನು ಚಾಲನೆ ಮಾಡುತ್ತಾ ಇದ್ದಂತಹ ಸಮಯದಲ್ಲಿ ನನ್ನ ಗಂಡನು ಬೇರೆ ಯಾವುದೋ ಒಂದು ವಾಹನವನ್ನು ಓವರ್ ಟೇಕ್ ಮಾಡಲು ಪ್ರಯತ್ನ ಮಾಡಿದ್ದಾರೆ ಮತ್ತು ಅಂತಹ ಸಮಯದಲ್ಲಿ ನನ್ನ ಗಂಡನು ರಸ್ತೆಯ ಮಧ್ಯಭಾಗಕ್ಕೆ ತಮ್ಮ ದ್ವಿಚಕ್ರ ವಾಹನವನ್ನು ಚಾಲನೆ ಮಾಡಿದ್ದಾರೆ ಮತ್ತು ಆ ಕಾರಣದಿಂದ ಅಪಘಾತವು ಆಗಿದೆ ಮತ್ತು ಅಪಘಾತವು ಆಗಲು ನನ್ನ ಗಂಡನೇ ಸಂಪೂರ್ಣವಾಗಿ ಕಾರಣರಾಗಿದ್ದಾರೆ ಎಂದರೆ ಸುಳ್ಳು.

22. ನನ್ನ ಗಂಡನು ಒಂದು ಜೆಸಿಬಿ ವಾಹನದಲ್ಲಿ ಡ್ರೈವರ್ ಆಗಿ ಕೆಲಸ ಮಾಡುತ್ತಾ ಇದ್ದರು, ಆದರೆ ಆ ಜೆಸಿಬಿ ವಾಹನದ ಮಾಲೀಕರ ಹೆಸರು ನನಗೆ ಗೊತ್ತಿರುವುದಿಲ್ಲ.

23. ನನ್ನ ಗಂಡನು ಯಾವುದೇ ಕೆಲಸವನ್ನು ಮಾಡುತ್ತಾ ಇರಲಿಲ್ಲ ಮತ್ತು ನನ್ನ ಗಂಡನಿಗೆ ಒಂದು ತಿಂಗಳಿಗೆ 30 ಸಾವಿರ ರೂಪಾಯಿ ಆದಾಯ ಇರಲಿಲ್ಲ ಮತ್ತು ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

24. ಅಪಘಾತವು ಆದಂತಹ ದಿನದಂದೇ ಪೋಲೀಸರಿಗೆ ದೂರನ್ನು ಕೊಡಲು ನನಗೆ ತೊಂದರೆ ಇತ್ತೋ ಹೇಗೆ ಎಂದರೆ ನನಗೆ ಗೊತ್ತಾಗಲಿಲ್ಲ.

25. ಅಪಘಾತವು ಆದ ನಂತರ ಲಾರಿಯ ಚಾಲಕನು ಲಾರಿಯನ್ನು ಸ್ಥಳದಲ್ಲಿ ನಿಲ್ಲಿಸದೇ ಹೊರಟು ಹೋಗಿದ್ದಾನೋ ಹೇಗೆ ಎಂದರೆ ನನಗೆ ಗೊತ್ತಿಲ್ಲ.

26. ನನ್ನ ಗಂಡನ ಅಂತ್ಯಕ್ರಿಯೆ ಮತ್ತು ವೈಕುಂಠ ಸಮಾರಾಧನೆ ಇತ್ಯಾದಿಗಳಿಗೆ 2 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂಬುದಾಗಿ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಾ ಇದ್ದೇನೆ ಎಂದರೆ ಸುಳ್ಳು.

27. ಕೇವಲ ಹೆಚ್ಚಿನ ಪರಿಹಾರವನ್ನು ಪಡೆಯಬೇಕು ಎಂಬ ಉದ್ದೇಶದಿಂದ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಾ ಇದ್ದೇನೆ ಎಂದರೆ ಸುಳ್ಳು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.